## ಪತ್ರಿಕಾ ಪ್ರಕಟಣೆ

ವಿಜಯಪುರ

ದಿನಾಂಕ: 20.07.2021.

**1] ಸಿಂದಗಿ ಪೊಲೀಸ ಠಾಣೆ ಗುನ್ನೆ ನಂ: 199/2021 ಕಲಂ: 279, 337, 338, 304(ಎ) ಐಪಿಸಿ & 187 ಎಮ್.ವಿ.ಆ್ಯಕ್ಟ**

ದಿನಾಂಕ: 19.07.2021 ರಂದು 16:00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಕಾರ ನಂಬರ ಕೆಎ:36 ಎನ್:4286 ನೇದ್ದರ ಚಾಲಕ ಹೆಸರು ಮತ್ತು ವಿಳಾಸ ನಮೂದಿಲ್ಲ ಈತನು ತಾನು ನಡೆಸುತ್ತಿದ್ದ ಕಾರನ್ನು ವಿಜಯಪೂರ ಕಲಬುರ್ಗಿ ಎನ್ಎಚ್ 50 ರಸ್ತೆ, ಸಿಂದಗಿ ನಗರದ ಯಂಕಂಚಿ ಬೈಪಾಸ್‌ದಲ್ಲಿ ಚಿಕ್ಕಸಿಂದಗಿ ಕಡೆಯಿಂದ ಯಂಕಂಚಿ ಬೈಪಾಸ್ ಕಡೆಗೆ ಅತೀ ಜೋರಾಗಿ ಮತ್ತು ನಿಷ್ಕಾಳಜೀತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಯಿಸಿಕೊಂಡು ಬಂದು ಎನ್.ಎಚ್. ರಸ್ತೆ ದಾಟುತ್ತಿದ್ದ ಮೋಟಾರ ಸೈಕಲ್ ನಂಬರ ಕೆಎ:36 ಇಸಿ:2558 ನೇದ್ದರ ಸವಾರ ಮಲ್ಲಪ್ಪ ಭೀಮಣ್ಣ ತುಂಬಗಿ ವಯಾ: 27 ವರ್ಷ ಸಾ; ಜಲಪೂರ ತಾ; ತಾಳಿಕೋಟಿ. ಈತನ ಮೋಟಾರ ಸೈಕಲಿಗೆ ಡಿಕ್ಕಿ ಹಾಯಿಸಿ ಅಪಗಾತ ಪಡಿಸಿ ಅವನ ತಲೆಗೆ ಇತರೆ ಕಡೆಗೆ ಭಾರಿ ಗಾಯಪೆಟ್ಟು ಹೊಂದಿ ಸ್ಥಳದಲ್ಲಿಯೇ ಮೃತಪಟ್ಟಿದ್ದು ಅಲ್ಲದೆ ಎನ್.ಎಚ್. ರಸ್ತೆಯ ಎಡಬಾಜು ತಮ್ಮ ಸೈಡಿನಲ್ಲಿ ನಿಂತಿದ್ದ ಪಿರ್ಯಾದಿಯ ಬುಲೇರೋ ಜೀಪ ನಂಬರ ಕೆಎ:32 ಬಿ:9629 ನೇದ್ದಕ್ಕೆ ಎದುರುಗಡೆಯಿಂದ ಡಿಕ್ಕಿ ಹಾಯಿಸಿ ಅಪಗಾತ ಪಡಿಸಿದ್ದು ಅಪಗಾತದಲ್ಲಿ ಬುಲೇರೋ ಜೀಪಿನಲ್ಲಿದ್ದ ಸಾಕ್ಷಿದಾರ ಜನರಾದ ಯುವರಾಜ ತಂದೆ ಸುಭಾಸ ಪಾಟೀಲ ವಯಾ: 29 ವರ್ಷ ಸಾ; ಚಿತ್ತಾಪೂರ, ರಮೇಶ ತಂದೆ ಬಸಣ್ಣ ಮಾರಡಗಿ ವಯಾ: 38 ವರ್ಷ ಸಾ; ಚಿತ್ತಾಪೂರ, ಇವರಿಗೆ ಸಾದಾ ಗಾಯಪೆಟ್ಟಾಗಿದ್ದು ಅಲ್ಲದೆ ಅಪಘಾತ ಪಡಿಸಿದ ಕಾರಿನಲ್ಲಿದ್ದ ಅಜರ ರುಕ್ಮುದ್ದೀನ ಖುರೇಶಿ ವಯಾ: 30 ವರ್ಷ ಸಾ; ಕಲಬುರ್ಗಿ ಈತನಿಗೆ ಬಲಗಾಲಿಗೆ ಭಾರಿ ಗಾಯಪೆಟ್ಟಾಗಿದ್ದು ಅಪಘಾತ ಪಡಿಸಿದ ಕಾರಿನ ಚಾಲಕನು ಅಪಗಾತದ ಸಂಗತಿಯನ್ನು ಠಾಣೆಗೆ ತಿಳಿಸದೇ ಓಡಿ ಹೋಗಿರುತ್ತಾನೆ. ಈ ಬಗ್ಗೆ ಮಲ್ಲಿಕಾರ್ಜುನ ಶಾಂತಪ್ಪ ಅವಂಟಿ. ಸಾ: ಕೂಡ್ಲಾ ತಾ; ಸೇಡಂ. ಜಿ: ಕಲಬುರ್ಗಿ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 19.07.2021 ರಂದು ಸಿಂದಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 209/2021 ಕಲಂ: 87 ಕೆ.ಪಿ.ಆ್ಯಕ್ಟ**

ದಿನಾಂಕ 19.07.2021 ರಂದು 16:30 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಗಣಪತಿ ದುರ್ಗಪ್ಪ ಕಾಂಬಳೆ ಸಾ॥ ಶಿರನಾಳ 2] ಅಮಸಿದ್ದ ಕಾಮಾ ಚೌಗಲೆ ಸಾ॥ ಶಿರನಾಳ 3] ಸಂಬಾಜಿ ನಾಗಪ್ಪ ಕಾಂಬಳೆ ಸಾ॥ ಶಿರನಾಳ 4] ಅಮಸಿದ್ದ ಶಿವಪ್ಪ ಮಾದರ ಸಾ॥ ಶಿರನಾಳ 5] ಸುರೇಶ ಜ್ಯೋತಿಬಾ ಲೋಕಂಡೆ ಸಾ॥ ಶಿರನಾಳ 6] ಯಲ್ಲಪ್ಪ ಶ್ರೀದೇವಿ ಕಾಂಬಳೆ ಸಾ॥ ಶಿರನಾಳ 7] ಸೋಮನಿಂಗ ಮಾದೇವ ಒಡೆಯರ ಸಾ॥ ಶಿರನಾಳ 8] ರವೀಂದ್ರ ವಿಠ್ಠಲ ಶಿರನಾಳ ಸಾ॥ ಶಿರನಾಳ 9] ದಿಲೀಪ ಮರಳಪ್ಪ ಚಲವಾದಿ ಸಾ॥ ಕನ್ನೂರ 10] ಚಂದ್ರಕಾಂತ ಪೀರಪ್ಪ ಚಲವಾದಿ ಸಾ॥ ಕನ್ನೂರ 11] ರಾಜು ರಾಮಣ್ಣ ಶಿರನಾಳ ಸಾ॥ ಶಿರನಾಳ ಇವರು ಕನ್ನೂರ ಗ್ರಾಮದ ಹದ್ದಿ ಕೆನಾಲ್ ಹತ್ತಿರ ಸಾರ್ವಜನಿಕ ಹಳ್ಳದಲ್ಲಿ ಕುಳಿತು ತಮ್ಮ ತಮ್ಮ ಫಾಯ್ದೆಗೋಸ್ಕರ ಇಸ್ಪೇಟ ಎಲೆಗಳ ಮೇಲೆ ಹಣವನ್ನು ಬೆಟ್ಟ ಕಟ್ಟಿ ಅಂದರ-ಬಾಹರ ಅಂಬುವ ಇಸ್ಪೆಟ ಮನ್ನಾ ಜೂಜಾಟ ಆಡುತ್ತಿದ್ದಾಗ ಸಿಕ್ಕ ಅಪರಾಧ. ಜಪ್ತಾದ ಮಾಲು: ರೋಕ ಹಣ-3520/- 2) 52 ಇಸ್ಪೇಟ ಎಲೆಗಳು ಕಿ॥ 00=00 ಈ ಬಗ್ಗೆ ಜಿ ಎಸ್ ಉಪ್ಪಾರ ಪಿಎಸ್ಐ ರೂರಲ್ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 19.07,2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 123/2021 ಕಲಂ: ಮಹಿಳೆ ಕಣೆ.**

ದಿನಾಂಕ 29.06.2021 ರಂದು ಮುಂಜಾನೆ 0900 ಗಂಟೆ ಸುಮಾರಿಗೆ ಇದರಲ್ಲಿ ಕಾಣೆಯಾದ ದೀಪಿಕಾ ತಂ ರೇವಣಸಿದ್ದ ಬಿರಾದಾರ ವಯಾ:21 ವರ್ಷ ತಾ: ಬೂದಿಹಾಳ ಇವಳು ಬೂದಿಹಾಳ ಗ್ರಾಮದ ತನ್ನ ತೋಟದ ಜಮೀನದಲ್ಲಿಂದ ಇಂಡಿ ಡಿಗ್ರಿ ಕಾಲೇಜಿಗೆ ಹೋಗಿ ಬಿ ಕಾಮ್ ಮಾರ್ಕ್ಸ ಕಾರ್ಡವನ್ನು ತೆಗೆದುಕೊಂಡು ಬರುತ್ತೇನೆ ಅಂತಾ ಮನೆಯಲ್ಲಿ ಹೇಳಿ ಹೋದವಳು ಮರಳಿ ಮನಿಗೆ ಬಾರದೇ ಎಲ್ಲಿಯೋ ಕಾಣೆಯಾಗಿರುತ್ತಾಳೆ. ಈ ಬಗ್ಗೆ ರೇವಣಸಿದ್ದ ತಂ ಸಿದ್ರಾಮ ಬಿರಾದಾರ ಸಾ: ಬೂದಿಹಾಳ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 19.07,2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 125/2021 ಕಲಂ: 87 ಕೆ.ಪಿ ಆ್ಯಕ್ಟ.**

ದಿನಾಂಕ: 19.07.2021 ರಂದು 17.15 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1) ಈರಣ್ಣ. ಮಲಗೊಂಡ. ಹತ್ತಳ್ಳಿ ಸಾ॥ ಆಹೇರಿ ಜಂಬಗಿ ತಾ॥ ಜಿ॥ ವಿಜಯಪೂರ 2) ಬಸವರಾಜ. ರೇವಣಸಿದ್ದಪ್ಪ. ಚಿಮ್ಮಲಗಿ. ಸಾ॥ ಆಹೇರಿ ಜಂಬಗಿ ತಾ॥ ವಿಜಯಪೂರ 3) ಮಹಿಬೂಬ. ಲಾಲಸಾಬ. ಉಕ್ಕಲಿ. ಸಾ॥ ತಾಂಬಾ 4) ಸಂತೋಷ. ಮಲಕಪ್ಪ. ತಳವಾರ. ಸಾ॥ ಚಟ್ಟರಕಿ ತಾ॥ ಸಿಂದಗಿ ಇವರೆಲ್ಲರೂ ಕೂಡಿಕೊಂಡು ಹಿರೇಮಸಳಿ-ತಾಂಬಾ ಡಾಂಬರ ರಸ್ತೆಯ ಹಿರೇಮಸಳಿ ದಾಟಿ ಒಂದು ಕಿ.ಮಿ ಅಂತರದ ಮೇಲೆ ದೊಡ್ಡ ಕೆನಾಲ್ ಬಾಜು ಸಾರ್ವಜನಿಕ ಸ್ಥಳದಲ್ಲಿ ಕುಳಿತು ತಮ್ಮ ಫಾಯಿದೆಗೋಸ್ಕರ ಇಸ್ಪೇಟ ಎಲೆಗಳ ಸಹಾಯದಿಂದ ಪಣಕ್ಕೆ ಹಣ ಹಚ್ಚಿ ಅಂದರ ಬಾಹರ ಅಂಬುವ ಮನ್ನಾ ಜೂಜಾಟವನ್ನು ಆಡುತ್ತಿರುವಾಗ ಸಿಕ್ಕಿದ್ದು ಅದೆ. ಜಪ್ತಾದ ಮುದ್ದೇಮಾಲು 1) ರೊಖ ಹಣ ಒಟ್ಟು-12,550/- ರೂಗಳು. 2) 52 ಇಸ್ಪೇಟ್ ಎಲೆಗಳು ಈ ಬಗ್ಗೆ ಸ:ತ: ಮಾಳಪ್ಪ ಪೂಜಾರಿ ಪಿ.ಎಸ್.ಐ ಇಂಡಿ ಗ್ರಾಮೀಣ ಪೊಲೀಸ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 19.07,2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**5] ಸಿಂದಗಿ ಪೊಲೀಸ ಠಾಣೆ ಗುನ್ನಾ. ನಂ: 198/2021 ಕಲಂ: 15 [ಎ], 32 [3]. ಕೆ.ಇ ಆ್ಯಕ್ಟ.**

ದಿನಾಂಕ: 17.07.2021 ರಂದು 16:10 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ 1] ಗಂಗಾಧರ ಶಿವರಾಯ ಬಿರಾದಾರ ಸಾ: ಆಹೇರಿ ತಾ: ಸಿಂದಗಿ ಈತನು ಸರಕಾರದಿಂದ ಯಾವುದೇ ಲೈಸನ್ಸ ಇಲ್ಲದೆ ತನ್ನ ಪಾಯದೆಗೋಸ್ಕರ ಆಹೇರಿ ಗ್ರಾಮದ ಬಸವೇಶ್ವರ ಸರ್ಕಲ್ ಹತ್ತಿರ ಇರುವ ಹೋಟೇಲದ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಸರಾಯಿ ಕುಡಿಯಲು ಸ್ಥಳವಕಾಶ ಮಾಡಿಕೊಡುತಿದ್ದಾಗ ಸಿಕ್ಕ ಅಪರಾಧ. ಈ ಬಗ್ಗೆ ಸ:ತ: ಎಸ್.ಎಚ್ ಹೊಸಮನಿ ಪಿ.ಎಸ್.ಐ ಸಿಂದಗಿ ಪೊಲೀಸ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 19.07,2021 ರಂದು ಸಿಂದಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.